ಪ್ರೇಮಕುಮಾರ್ ಹರಿಯಬ್ಬೆ

ಕಲೆ: ಪ್ರವೀಣ್ ಆಚಾರ್ಯ

# ನೇಪಥ್ಯದಲ್ಲೊಂದು ನೇಪಥ್ಯ



ಎಲ್ಲೋ ನೋಡಿದ್ದೇನೆ, ಆದರೆ ಎಲ್ಲಿ ಅನ್ನೋದು ನೆನಪಾಗುತ್ತಿಲ್ಲ ಅಂದುಕೊಳ್ಳುವಷ್ಟರಲ್ಲಿ ಆಕೆಯೇ ನಮಸ್ತೆ ಸರ್ ಎನ್ನುತ್ತ ಎದುರಿಗೆ ಇದ್ದ ಕುರ್ಚಿ ಪಕ್ಕ ಬಂದು ನಿಂತಳು.

'ಸರ್, ನಾನು ಮಾಧವಿ. ನಿಮ್ಮ ಸ್ಟೂಡೆಂಟ್. 97ರ ಬ್ಯಾಚ್' ಎಂದಾಗ ಪ್ರೊಫೆಸರ್ ಕೆಲವೇ ಕ್ಷಣ ಅವಳನ್ನೇ ದಿಟ್ಟಿಸಿ ನೋಡಿದರು.

'ನೆನಪಾಯ್ತ ಸರ್,' ಎನ್ನುತ್ತ ಮತ್ತೆ ಅವರತ್ತ ನೋಡಿದಳು. ಅವರ ಕಣ್ಣುಗಳು ಕಿರಿದಾಗಿ, ಹಣೆ ಮೇಲೆ ಗೆರೆಗಳು ಮೂಡಿದವು. ನೆನಪು ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಅಂತ ಅನ್ನಿಸಿತು.

ವಯಸ್ಸು ನಲವತ್ತೈದು ದಾಟಿರಬಹುದು. ತಲೆ ಅರ್ಧ ನೆರೆತಿದೆ. ತಿಳಿಕಂದು ಬಣ್ಣದ ದೊಡ್ಡ ಕಣ್ಣುಗಳು. ಈ ಇಪ್ಪತ್ತೈದು ವರ್ಷಗಳಲ್ಲಿ ಎಷ್ಟೋ ಸ್ಟೂಡೆಂಟ್‌ಗಳು ಬಂದು ಹೋಗಿದ್ದಾರೆ. ಆಗಾಗ ಭೇಟಿಯಾಗುವ ಕೆಲವರಷ್ಟೇ ಅವರ ನೆನಪಲ್ಲಿ ಉಳಿದಿದ್ದಾರೆ.

ಇಲ್ಲ, ನೆನಪಾಗಲಿಲ್ಲ ಎನ್ನುವಂತೆ ತಲೆ ಆಡಿಸಿದರು. ಕೆಲ ಕ್ಷಣ ಸುಮ್ಮನಿದ್ದು ನಂತರ, 'ಆ್ಞ... ನೀವು ಇಲ್ಲಿ ಓದುವಾಗಲೇ ನಿಮ್ಮದೊಂದು ಪೊಯೆಟ್ರಿ ಕಲೆಕ್ಷನ್ ಬಂದಿತ್ತಲ್ವ. ಅದಕ್ಕೆ ನಾನೇ ಮುನ್ನುಡಿ ಬರೆದಿದ್ದೆ' ಎನ್ನುತ್ತ ಅವಳ ಮುಖ ನೋಡಿದರು.

ಅವಳಿಗೆ ಖುಷಿಯಾಯಿತು. 'ಹೌದು ಸರ್, ಬಹುವಚನ ಬೇಡ ಮಾಧವಿ ಅಂತ ಕರೀರಿ ಸಾಕು. ನೀವು ನನ್ನ ಗುರುಗಳು' ಎನ್ನುತ್ತ ಹೆಗಲಲ್ಲಿದ್ದ ಬ್ಯಾಗನ್ನು ಇಳಿಸುತ್ತ ಕುರ್ಚಿಯಲ್ಲಿ ಕೂತಳು.

'ಏನ್ ಮಾಡ್ತಿದ್ದೀರಿ' ಎಂಬ ಪ್ರೊಫೆಸರ್ ಪ್ರಶ್ನೆಗೆ ಉತ್ತರಿಸಲು ಹಿಂಜರಿದಳು... ಕೆಲ ಕ್ಷಣ ಸಾವರಿಸಿಕೊಂಡು, 'ಮಗನನ್ನು ಹುಡುಕಿಕೊಂಡು ಅಲೀತಿದ್ದೀನಿ ಸರ್' ಎನ್ನುತ್ತ ಅವರನ್ನೇ ನೋಡಿದಳು.

ಅರ್ಥ ಆಗಲಿಲ್ಲ ಎಂಬ ಭಾವವನ್ನು ಅವರ ಮುಖ ಹೇಳಿತು. 'ಸರ್, ಅದನ್ನೆಲ್ಲ ಹೇಳ್ತಾ ಕೂತರೆ ಇಡೀ ದಿನ ಬೇಕಾಗಬಹುದು. ನಿಮಗೆ ಅಷ್ಟು ಟೈಂ ಇಲ್ಲ ಅಂತ ನಂಗೊತ್ತು. ಕ್ರಿಸ್ಪಾಗಿ ಹೇಳಿ ಬಿಡ್ತೀನಿ' ಎನ್ನುತ್ತ ಸಾಧ್ಯವಾದಷ್ಟೂ ಧ್ವನಿ ತಗ್ಗಿಸಿ, 'ಸರ್, ನನ್ನ ಮಗ ಮನೆ ಬಿಟ್ಟು ಎಲ್ಲೋ ಹೋಗಿದಾನೆ. ಮೂರು ತಿಂಗಳಿಂದ ಅವನನ್ನು ಹುಡುಕ್ತಾ ಇದೀನಿ. ಆಂಧ್ರದ ರಾಯಲಸೀಮೆಯಲ್ಲಿ ಎಲ್ಲೋ ಒಂದ್ಕಡೆ ಇದಾನೆ ಅಂತ ಗೊತ್ತಾಗಿದೆ.